ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಖ್ಯಾತ ಗಾಯಕಿ ಶ್ರೀಮತಿ ಗಂಗೂಬಾಯಿ ಹಾನಗಲ್ ಅವರ ಹೆಸರಿನಲ್ಲಿ ಧಾರವಾಡ ವಿಶ್ವವಿದ್ಯಾಲಯ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗಿದೆಯೇ,

ಆ) ಧಾರವಾಡದಲ್ಲಿ ವಿಜ್ಞಾನ ನಗರಿ ಸ್ಥಾಪನೆ ಆಗಿದೆಯೆ,

ಇ) ಸಹಕಾರ ಚಳುವಳಿಯ ಅಧ್ಯಯನಕ್ಕಾಗಿ ದಿವಂಗತ ಕೆ ಎಚ್ ಪಾಟೀಲರ ಹೆಸರಿನಲ್ಲಿ ಪೀಠ ಸ್ಥಾಪಿಸಲಾಗಿದೆಯೆ,

ಈ) ಈ ಮೂರು ಭರವಸೆಗಳು ಈಡೇರಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು

ಉ) ಈ ಘೋಷಣೆಗಳನ್ನು ಈ ಸರಕಾರ ಅನುಷ್ಠಾನಗೊಳಿಸುವುದೇ

ಊ) ಹಾಗಿದ್ದಲ್ಲಿ, ಅದಕ್ಕೆ ಒಂದು ಕಾಲಮಿತಿ ಹಾಕಿಕೊಳ್ಳಲಾಗುವುದೇ?

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) ಇಲ್ಲ

ಆ) ಇದು ಸರ್ಕಾರದ ಪರಿಶೀಲನೆಯಲ್ಲಿದೆ

ಇ) ಹೌದು ಸ್ಥಾಪಿಸಲಾಗಿದೆ

ಈ) 1) ಶ್ರೀಮತಿ ಗಂಗೂಬಾಯಿ ಹಾನಗಲ್‌ರವರ ಹೆಸರಿನಲ್ಲಿ ಧಾರವಾಡ ವಿಶ್ವವಿದ್ಯಾಲಯ ಸ್ಥಾಪನೆಗೆ ಕುರಿತಂತೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ

2) ದಿವಂಗತ ಕೆ ಹೆಚ್ ಪಾಟೀಲರ ಹೆಸರಿನಲ್ಲಿ ಕುವೆಂಪು ವಿಶ್ವವಿದ್ಯಾಲಯದಲ್ಲಿ ಸಹಕಾರ ಚಳುವಳಿಯ ಅಧ್ಯಯನಕ್ಕಾಗಿ ಈಗಾಗಲೇ ಪೀಠವನ್ನು ಸ್ಥಾಪಿಸಲಾಗಿದೆ

3) ಧಾರವಾಡದಲ್ಲಿ ವಿಜ್ಞಾನ ನಗರವನ್ನು ಸ್ಥಾಪಿಸಲು ಸರ್ಕಾರವು 2002–2003ರಲ್ಲಿ ರೂ 20 ಲಕ್ಷ ಗಳ ಅನುದಾನವನ್ನು ಬಿಡುಗಡೆ ಮಾಡಿದೆ ವಿಜ್ಞಾನನಗರ ಸ್ಥಾಪನೆಗೆ ಕರ್ನಾಟಕ ವಿಶ್ವವಿದ್ಯಾಲಯದ ಅಧೀನದಲ್ಲಿರುವ 50 ಎಕರೆ ಜಮೀನನ್ನು ಹಸ್ತಾಂತರಗೊಳಿಸುವ ಪ್ರಕ್ರಿಯೆಯು ಚಾಲನೆಯಲ್ಲಿದೆ

(ಈ) ನಲ್ಲಿ ಉತ್ತರಿಸಿದ ಮೇರೆಗೆ ಇದು ಉದ್ಭವಿಸುವುದಿಲ್ಲ

496(849) ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಪಶು ಆಸ್ಪತ್ರೆ ಪಶು ಚಿಕಿತ್ಸಾಲಯ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ ಹಾಗೂ ಕೃತಕ ಗರ್ಭಧಾರಣಾ ಉಪ ಕೇಂದ್ರಗಳಲ್ಲಿ ಖಾಲಿ ಇರುವ ವೈದ್ಯರು ಹಾಗೂ ಇತರೆ ಹುದ್ದೆಗಳು ಯಾವುವು (ವಿವರ ನೀಡುವುದು)

ಆ) ಖಾಲಿ ಇರುವ ಹುದ್ದೆಗಳನ್ನು ಯಾವಾಗ ತುಂಬಲಾಗುವುದು

ಇ) ಕಟ್ಟಡಗಳು ಇಲ್ಲದಿರುವ ಆಸ್ಪತ್ರೆ ಚಿಕಿತ್ಸಾಲಯ ಹಾಗೂ ಚಿಕಿತ್ಸಾ ಕೇಂದ್ರಗಳಿಗೆ ಕಟ್ಟಡಗಳನ್ನು ಕಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು

ಈ) ಮುಂಡರಗಿ ಕ್ಷೇತ್ರದಲ್ಲಿ ಖಾಲಿ ಇರುವ ಹುದ್ದೆಗಳು ಎಷ್ಟು ಹಾಗೂ ಸದರಿ ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಸಹಾಯಕ ನಿರ್ದೇಶಕರು 45
ಪಶು ವೈದ್ಯಾಧಿಕಾರಿಗಳು 922
ಪಶುವೈದ್ಯಕೀಯ ಮೇಲ್ವಿಚಾರಕರು 81
ಹಿರಿಯ ಪಶುವೈದ್ಯಕೀಯ ಪರೀಕ್ಷಕರು 256
ಪಶುವೈದ್ಯಕೀಯ ಪರೀಕ್ಷಕರು 417
ಪಶುವೈದ್ಯಕೀಯ ಸಹಾಯಕರು 1058
ಡಿ ದರ್ಜೆ ನೌಕರರು 1219
ಒಟ್ಟು 3998

ಆ) ಸಾಮಾನ್ಯ ನೇಮಕಾರಿಗೆ ಸರ್ಕಾರದ ನಿರ್ಭಂದವಿರುತ್ತದೆ ಆದಾಗ್ಯೂ ಇತರ ಖಾಲಿ ಹುದ್ದೆಗಳನ್ನು ಮುಂಬಡ್ತಿಯ ಮೂಲಕ ತುಂಬಲಾಗುವುದು 250 ಪಶುವೈದ್ಯರನ್ನು ರಾಜ್ಯಾದ್ಯಂತ ನೇಮಿಸಿ ಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿದೆ ಡಿ ದರ್ಜೆ ಖಾಲಿ ಹುದ್ದೆಗಳನ್ನು ಅನುಕಂಪದ ಆಧಾರದ ಮೇಲೆ ತುಂಬಲಾಗುವುದು

ಇ) ನಬಾರ್ಡ್ ಮೂಲಕ ಗ್ರಾಮೀಣ ಮೂಲಭೂತ ಅಭಿವೃದ್ಧಿ ನಿಧಿಯಿಂದ ಪಶುವೈದ್ಯಕೀಯ ಸಂಸ್ಥೆಗಳಿಗೆ ಕಟ್ಟಡಗಳನ್ನು ನಿರ್ಮಾಣ ಮಾಡಲು ಪರಿಶೀಲಿಸಲಾಗುತ್ತಿದೆ

ಈ) ಮುಂಡರಗಿ ಕ್ಷೇತ್ರದಲ್ಲಿ 19 ವಿವಿಧ ವೃಂದದ ಹುದ್ದೆಗಳು ಖಾಲಿ ಇವೆ ರಾಜ್ಯಾದ್ಯಂತ 250 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಸದ್ಯದಲ್ಲಿ ಭರ್ತಿ ಮಾಡಲಾಗುತ್ತಿದೆ ಖಾಲಿ ಇರುವ 5 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ಪರಿಗಣಿಸಲಾಗುವುದು ಖಾಲಿ ಇರುವ 4 ಪಶು ಪರೀಕ್ಷಕರ ಹುದ್ದೆಗಳನ್ನು ನಿಯಾಮನುಸಾರ ಬಡ್ತಿ ಮೂಲಕ ಭರ್ತಿ ಮಾಡಲು ಪರಿಶೀಲಿಸಲಾಗುವುದು ಹೊಸ ನೇಮಕಾತಿ ಮಾಡಲು ಸರ್ಕಾರದ ನಿರ್ಭಂಧವಿರುತ್ತದೆ

497(850) ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಗದಗ ಜಿಲ್ಲೆ ಮುಂಡರಗಿ ಕ್ಷೇತ್ರದಲ್ಲಿ ಪಶು ಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೇರಿಸಲಾಗಿದೆಯೇ? (ವಿವರ ನೀಡುವುದು)

ಆ) ಹೊಸದಾಗಿ ಪಶು ಚಿಕಿತ್ಸಾಲಯಗಳನ್ನು ಮಂಜೂರು ಮಾಡಲಾಗುವುದೇ? *

ಇ) ಮುಂಡರಗಿ ಪಶು ಆಸ್ಪತ್ರೆಯ ಕಟ್ಟಡ ಅರ್ಧಕ್ಕೆ ನಿಂತಿದ್ದು ಅದನ್ನುಪೂರ್ಣ ಗೊಳಿಸಲಾಗುವುದೆ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಇಲ್ಲ

ಆ) ಇಲ್ಲ

ಇ) ಸದರಿ ಕಟ್ಟಡವು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುತ್ತಿದ್ದು, ಅದನ್ನು ತೀವ್ರವಾಗಿ ಪೂರ್ಣವಾಗೊಳಿಸಲು ಗದಗ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸರ್ಕಾರದಿಂದ ಒತ್ತಾಯಿಸಲಾಗಿದೆ